**O.S.No.79/2014 - P.W.1**

**ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 17-07-2023.**

**ಪಾಟೀ ಸವಾಲು - ಪ್ರತಿವಾದಿ ನಂ.1 ರಿಂದ 3 ರವರ ಪರ ವಕೀಲರಿಂದ :**

**1)** ನಾನು 9 ನೇ ತರಗತಿಯವರೆಗೆ ಓದಿರುತ್ತೇನೆ. ಸಾಮಾನ್ಯವಾಗಿ ಯಾವುದೇ ಆಸ್ತಿಯನ್ನು ಖರೀದಿಸಿದಾಗ ಹಿಂದಿನ ಮೂಲ ದಾಖಲೆಗಳನ್ನು ಖರೀದಿದಾರರು ಪಡೆದುಕೊಳ್ಳುತ್ತಾರೆ ಎಂದರೆ ಸರಿ. ಸಿದ್ದಪ್ಪ ರವರು ಮರಿಯಪ್ಪ ರವರಿಂದ ಆ ರೀತಿ ದಾಖಲೆಗಳನ್ನು ಪಡೆದುಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ಸಿದ್ದಪ್ಪ ರವರು ಮರಿಯಪ್ಪ ರವರಿಂದ 1 ಎಕರೆ ಜಮೀನನ್ನು ಖರೀದಿ ಮಾಡಿದ್ದರು. ಮರಿಯಪ್ಪ ರವರು ಉಳಿಸಿಕೊಂಡ 1 ಎಕರೆ ಜಮೀನನಲ್ಲಿ ಇವತ್ತಿಗೂ ಮರಿಯಪ್ಪ ರವರೇ ಸ್ವಾಧೀನದಲ್ಲಿ ಇದ್ದಾರೆ. ಸಿದ್ದಪ್ಪ ರವರಿಗೆ ಉತ್ತರದ 1 ಎಕರೆ ಜಮೀನನ್ನು ಕೊಟ್ಟು ದಕ್ಷಿಣದ 1 ಎಕರೆಯನ್ನು ಮರಿಯಪ್ಪ ರವರು ಉಳಿಸಿಕೊಂಡರು.

**2)** ಮುನಿವೆಂಕಟಪ್ಪ ರವರಿಗೆ ಸದರಿ 3 ಎಕರೆ ಜಮೀನು ಸರ್ಕಾರದಿಂದ ಮಂಜೂರು ಆಗಿತ್ತು. ಮುನಿವೆಂಕಟಪ್ಪ ರವರು ಪರಿಶಿಷ್ಟ ಪಂಗಡಕ್ಕೆ ಸೇರಿದವರು ಆಗಿರುತ್ತಾರೆ ಎಂದರೆ ನನಗೆ ಈಗ ಗೊತ್ತಾಯಿತು ಎಂದು ಹೇಳುತ್ತಾರೆ. ಅಸಲು ದಾವಾ ನಂ.871/2012 ರಲ್ಲಿ ತೋರಿಸಿರುವ 2 ಎಕರೆ ಜಮೀನು ಮುನಿವೆಂಕಟಪ್ಪ ರವರಿಗೆ ಮಂಜೂರಾದ ಜಮೀನು ಆಗಿರುತ್ತದೆ. ಸದರಿ ದಾವೆಯಲ್ಲಿ ಅಂದರೆ ನಿ.ಪಿ.23 ರಲ್ಲಿ ತೋರಿಸಿರುವ ಚೆಕ್ಕುಬಂದಿ ಸರಿಯಾಗಿ ಇದೆ. ಸಿದ್ದಪ್ಪ ರವರು ಖರೀದಿಸಿದ ಸ್ವತ್ತಿನ ಪೂರ್ವಕ್ಕೆ - ಸರ್ಕಾರಿ ರಸ್ತೆ ಇರುತ್ತದೆ. ಪಶ್ಚಿಮಕ್ಕೆ - ಅಶ್ವತಪ್ಪ ಮತ್ತು ರಾಮಕೃಷ್ಣಪ್ಪ ರವರ ಜಮೀನು ಇರುತ್ತವೆ. ಸದರಿ 2 ಎಕರೆ ಉತ್ತರಕ್ಕೆ - ಮುಕ್ತರ್ ಅಹಮ್ಮದ್ ಖಾನ್ ರವರ ಜಮೀನು ಇದ್ದು ಅವರು ಮಾರಾಟ ಮಾಡಿರುತ್ತಾರೋ? ಇಲ್ಲವೋ? ಎಂದು ನನಗೆ ಗೊತ್ತಿಲ್ಲ. ಸದರಿ 2 ಎಕರೆಯ ಉತ್ತರಕ್ಕೆ

- ಈಗ ಮುಕ್ತರ್ ಅಹಮ್ಮದ್ ಖಾನ್ ರವರ ಜಮೀನಿನ ಬದಲು ದೇವರಾಜ್ ರವರ ಜಮೀನು ಇರುತ್ತದೆ. ಮುಕ್ತರ್ ಅಹಮ್ಮದ್ ಖಾನ್ ರವರ ಜಾಗದಲ್ಲಿ ಯಾರು ಇದ್ದಾರೆ ಎಂದು ನನಗೆ ಗೊತ್ತಿಲ್ಲ.

**3)** ಸಿದ್ದಪ್ಪ ರವರು ಖರೀದಿಸಿದ 1 ಎಕರೆಗೆ ಕಂಪೌಂಡ್ ಗೋಡೆ ಅಥವಾ ಬೇಲಿಯನ್ನು ಹಾಕಿರುವುದಿಲ್ಲ. ಇವತ್ತಿಗೂ ಕಂಪೌಂಡ್ ಗೋಡೆ ಅಥವಾ ಬೇಲಿ ಇರುವುದಿಲ್ಲ. ಸಿದ್ದಪ್ಪ ರವರು ಖರೀದಿಸಿದ ಜಮೀನಿಯಲ್ಲಿ ಯಾವುದೇ ಕಟ್ಟಡ ಇರುವುದಿಲ್ಲ. ಸಿದ್ದಪ್ಪ ರವರು ಜಮೀನನ್ನು ಖರೀದಿಸುವಾಗ ಅವರಿಗೆ ಎಷ್ಟು ವಯಸ್ಸು ಆಗಿತ್ತು ಎಂದು ನನಗೆ ಗೊತ್ತಿಲ್ಲ. ಸಿದ್ದಪ್ಪ ರವರಿಗೆ ಚೆನ್ನಹಳ್ಳಿಯಲ್ಲಿ ಪಿತ್ರಾರ್ಜಿತ ಆಸ್ತಿ ಇತ್ತು. ಸದರಿ ಆಸ್ತಿಯನ್ನು ನಮ್ಮ ತಂದೆ 2012-13 ರಲ್ಲಿ ಮಾರಾಟ ಮಾಡಿರುತ್ತಾರೆ. ಸದರಿ ಆಸ್ತಿ 4 ಎಕರೆ 20 ಗುಂಟೆ ಇತ್ತು. ಸಿದ್ದಪ್ಪ ಒಬ್ಬರೇ ಮಗ ಆಗಿದ್ದರು. ಸದರಿ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದರು. ಸದರಿ ಜಮೀನಿನ ಬಗ್ಗೆ ಪಹಣಿ ಪತ್ರಿಕೆಗಳು ನನ್ನ ಬಳಿ ಇಲ್ಲ. ಸಿದ್ದಪ್ಪ ರವರಿಗೆ 5 ಜನ ಗಂಡು ಮತ್ತು 2 ಹೆಣ್ಣುಮಕ್ಕಳು ಇದ್ದರು.

**4)** ದಾವಾ ಆಸ್ತಿಯನ್ನು ವ್ಯವಸಾಯ ಮಾಡಲು ನಾವು ಟ್ರ್ಯಾಕ್ಟರ್ ಅನ್ನು ಬಳಸುತ್ತಿಲ್ಲ. ಬಾಡಿಗೆಯ ಟ್ರ್ಯಾಕ್ಟರ್ ಅನ್ನು ಪಡೆದು ವ್ಯವಸಾಯ ಮಾಡುತ್ತೇವೆ. ನಮ್ಮ ಊರಿನ ನಾರಾಯಣಸ್ವಾಮಿ ಮತ್ತು ರಾಜಣ್ಣ ರವರಿಂದ ಟ್ರ್ಯಾಕ್ಟರ್ ಅನ್ನು ಬಾಡಿಗೆಗೆ ಪಡೆಯುತ್ತೇವೆ. ದಾವಾ ಆಸ್ತಿಯಲ್ಲಿ ಬಾವಿ ಅಥವಾ ಬೋರ್ ವೆಲ್ ಇರುವುದಿಲ್ಲ. ನೀರಿನ ಸಂಪರ್ಕ ಸಹ ಇರುವುದಿಲ್ಲ. ವ್ಯವಸಾಯ ಮಾಡಲು ಮಳೆಯ ನೀರನ್ನು ಆಧರಿಸಿರುತ್ತೇವೆ. ಈಗ ದಾವಾ ಸ್ವತ್ತಿನಲ್ಲಿ ರಾಗಿ ಬೆಳೆಸಿದ್ದೇವೆ. ವರ್ಷಕ್ಕೆ ಸುಮಾರು 15 ಕ್ವಿಂಟಲ್ ರಾಗಿ ಬರುತ್ತದೆ. ನಮಗೆ ಬೇರೆ ಯಾವುದೇ ತೋಟ ಅಥವಾ ಜಮೀನು ಇಲ್ಲ. 15 ಕ್ವಿಂಟಲ್ ರಾಗಿಯನ್ನು ಮನೆಯಲ್ಲಿ ಇಟ್ಟುಕೊಳ್ಳುತ್ತೇವೆ.

**5)** ಟ್ರ್ಯಾಕ್ಟರ್ ಅನ್ನು ಪೂರ್ವದಿಂದ ದಾವಾ ಸ್ವತ್ತಿಗೆ ತೆಗೆದುಕೊಂಡು ಬರುತ್ತವೆ. ಪೂರ್ವದ ಜಮೀನಿನ ಮಾಲೀಕರು ಅವರ ಜಮೀನಿನ ಮೇಲೆ ಟ್ರ್ಯಾಕ್ಟರ್ ತಂದರೆ ಏನು ಹೇಳುವುದಿಲ್ಲ. ಅವರು ದೇವರಾಜ್ ಆಗಿದ್ದು ನಮ್ಮ ಊರಿನವರು. 15 ಕ್ವಿಂಟಲ್ ರಾಗಿಯನ್ನು ನಾವು ಯಾರಿಗೂ ಮಾರಾಟ ಮಾಡುವುದಿಲ್ಲ, ಸ್ವಂತಕ್ಕೆ ಬಳಸುತ್ತೇವೆ. ನಮಗೆ ಬೇರೆ ಯಾವುದೇ ಆದಾಯವಿಲ್ಲ. ದಾವಾ ಸ್ವತ್ತಿನಲ್ಲಿ ರಾಗಿ ಬೆಳೆದಿರುವ ಬಗ್ಗೆ ಫೋಟೋ ತೆಗೆದಿರುವುದಿಲ್ಲ. ಫೋಟೋ ತೆಗೆದು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ನ್ಯಾಯಾಲಯದಿಂದ ಆಯುಕ್ತರನ್ನು ನೇಮಕ ಮಾಡಿ ದಾವಾ ಸ್ವತ್ತಿನ ಬಗ್ಗೆ ವರದಿ ಪಡೆಯಲು ನನ್ನ ಆಭ್ಯಂತರವಿಲ್ಲ.

**6)** ಮರಿಯಪ್ಪ ರವರು ಮೃತರಾಗಿರುತ್ತಾರೆ. ಯಾವ ವರ್ಷ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ಮರಿಯಪ್ಪ ರವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಮರಿಯಪ್ಪ ರವರ ಕುಟುಂಬದವರು ಅವರ ಆಸ್ತಿಯಲ್ಲಿ ರಾಗಿ ಬೆಳೆಸುತ್ತಿದ್ದಾರೆ. ಮರಿಯಪ್ಪ ರವರ ಕುಟುಂಬದವರ ಯಾರ ಹೆಸರು ನನಗೆ ಗೊತ್ತಿಲ್ಲ. ಈಗ ಯಾರು ವ್ಯವಸಾಯ ಮಾಡುತ್ತಿದ್ದರೋ ಅವರ ಹೆಸರನ್ನು ಹೇಳಲು ಬರುವುದಿಲ್ಲ. ದಾವಾ ಆಸ್ತಿಯನ್ನು ಖರೀದಿಸಲು ಮರಿಯಪ್ಪ ರವರಿಗೆ ಏನು ಆದಾಯ ಇತ್ತು ಎಂದು ನನಗೆ ಗೊತ್ತಿಲ್ಲ.

**7)** ಸಿದ್ದಪ್ಪ ರವರಿಗೆ ಎಷ್ಟು ಆದಾಯ ಇತ್ತು ಎಂದು ನನಗೆ ಗೊತ್ತಿಲ್ಲ. ಸಿದ್ದಪ್ಪ ರವರು ಬೆಳೆಯುತ್ತಿದ್ದ ಬೆಳೆಯನ್ನು ಏನು ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಮಾರಾಟ ಮಾಡುತ್ತಿದ್ದರೋ? ಇಲ್ಲವೋ? ಎಂದು ನನಗೆ ಗೊತ್ತಿಲ್ಲ.

**8)** ದಿನಾಂಕ: 12-11-1965 ರ ಕ್ರಯಪತ್ರದ ಮೂಲ ದಾಖಲೆ ಯಾರ ಬಳಿ ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರದ ಪ್ರತಿ ನನ್ನ ಬಳಿ ಇದೆ. ಅದನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ದಿನಾಂಕ: 23-11-1970 ರ ಕ್ರಯಪತ್ರದ ಮೂಲ ದಾಖಲೆ ನನ್ನ ಬಳಿ ಇದೆ. ಅದನ್ನು ಹಾಜರುಪಡಿಸಬೇಕು ಎಂದು ಗೊತ್ತಿಲ್ಲದೇ ಇರುವುದರಿಂದ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಅದನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ.

**9)** ಮರಿಯಪ್ಪ ರವರು ಮುನಿವೆಂಕಟಪ್ಪ ರವರಿಂದ ಯಾವುದೇ ಸ್ವತ್ತನ್ನು ಖರೀದಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.3 - ಖರೀದಿ ಪತ್ರ ಸೃಷ್ಟಿಸಿದ ದಾಖಲೆ ಎಂದರೆ ಸರಿಯಲ್ಲ. ಸದರಿ ದಾಖಲೆಗೆ ಮುನಿವೆಂಕಟಪ್ಪ ರವರು ರುಜು ಅಥವಾ ಹೆಬ್ಬೆರಳ ಗುರುತು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಹೆಬ್ಬೆರಳ ಗುರುತನ್ನು ಹಾಕಿರುತ್ತಾರೆ. ಮರಿಯಪ್ಪ ರವರು 2 ಎಕರೆ ಜಮೀನನ್ನು ಖರೀದಿಸಲು ಮುನಿವೆಂಕಟಪ್ಪ ರವರಿಗೆ ಎಷ್ಟು ಹಣ ನೀಡಿದ್ದರು ಎಂದು ನನಗೆ ಗೊತ್ತಿಲ್ಲ. ಅವರು ಹಣ ನೀಡಿರುತ್ತಾರೋ? ಇಲ್ಲವೋ? ಎಂದು ನನಗೆ ಗೊತ್ತಿಲ್ಲ. ಮರಿಯಪ್ಪ ರವರು ಮುನಿವೆಂಕಟಪ್ಪ ರವರಿಗೆ ಹಣ ನೀಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

**10)** ಸಿದ್ದಪ್ಪ ರವರು ದಾವಾ ಸ್ವತ್ತನ್ನು ರೂ.2,000/-ಗಳಿಗೆ ಖರೀದಿ ಮಾಡಿರುತ್ತಾರೆ. ಅವರು ಯಾವ ರೂಪದಲ್ಲಿ ಹಣ ಪಾವತಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಸಿದ್ದಪ್ಪ ರವರ ಬಳಿ ಅಷ್ಟು ಹಣ ಇದ್ದ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ. 1965 ರಲ್ಲಿ ಮರಿಯಪ್ಪ ರವರು ಕಂದಾಯ ದಾಖಲೆಗಳನ್ನು ಅವರ ಹೆಸರಿಗೆ ಮಾಡಿಕೊಂಡಿರುತ್ತಾರೋ? ಇಲ್ಲವೋ? ಎಂದು ನನಗೆ ಗೊತ್ತಿಲ್ಲ. ಸಿದ್ದಪ್ಪ ರವರು ಕಂದಾಯ ದಾಖಲೆಗಳನ್ನು ಅವರ ಹೆಸರಿಗೆ ಬದಲಾವಣೆ ಮಾಡಿಕೊಂಡಿರುವುದಿಲ್ಲ.

**11)** ಸಿದ್ದಪ್ಪ ರವರು ದಾವಾ ಸ್ವತ್ತನ್ನು ಖರೀದಿ ಮಾಡುವಾಗ ಅವರ ಜೊತೆಯಲ್ಲಿ ಇದ್ದ ವ್ಯಕ್ತಿಗಳು ಈಗ ತೀರಿಹೋಗಿರುತ್ತಾರೆ. ಖರೀದಿ ಮಾಡಿದ ವಿಷಯ ವೈಯಕ್ತಿಕವಾಗಿ ಗೊತ್ತಿರುವ ವ್ಯಕ್ತಿಗಳು ಈಗ ಮೃತರಾಗಿರುತ್ತಾರೆ. ಸಿದ್ದಪ್ಪ ರವರ ಮಕ್ಕಳು - ದೇವಣ್ಣ, ಮುನಿವೆಂಕಟಪ್ಪ, ರಾಮಕೃಷ್ಣಪ್ಪ, ರಾಜಣ್ಣ, ನಾರಾಯಣಸ್ವಾಮಿ, ಚಿಕ್ಕತಾಯಮ್ಮ ಮತ್ತು ಶಾಂತಮ್ಮ ಆಗಿರುತ್ತಾರೆ. ರಾಮಕೃಷ್ಣಪ್ಪ, ರಾಜಣ್ಣ ಮತ್ತು ನಾರಾಯಣಸ್ವಾಮಿ ರವರುಗಳು ಇಂದಿಗೂ ಜೀವಂತವಿದ್ದಾರೆ. ಅವರಿಗೆ ಸಿದ್ದಪ್ಪ ರವರು ದಾವಾ ಸ್ವತ್ತನ್ನು ಖರೀದಿಸಿದ ವಿಚಾರ ಗೊತ್ತಿರುತ್ತದೆ. ಅವರನ್ನು ನ್ಯಾಯಾಲಯಕ್ಕೆ ಕರೆಸಿ ವಿಚಾರಣೆ ಮಾಡುತ್ತೇವೆ. ಸಿದ್ದಪ್ಪ ರವರ 07 ಜನ ಮಕ್ಕಳ ಮಧ್ಯೆದಲ್ಲಿ ವಿಭಾಗ ಆಗಿರುತ್ತದೆ. ಊರಿನಲ್ಲಿ ಇದ್ದ ಆಸ್ತಿ ಬೇರೆಯವರಿಗೆ ಕೊಟ್ಟಿದ್ದು ದಾವಾ ಸ್ವತ್ತನ್ನು ನಮ್ಮ ತಂದೆಗೆ ಕೊಟ್ಟಿರುತ್ತಾರೆ. ಆ ಬಗ್ಗೆ ಯಾವುದೇ ದಾಖಲೆ ಇಲ್ಲ. ಸದರಿ ವಿಭಾಗ ಯಾವ ವರ್ಷ ಆಗಿರುತ್ತದೆ ಎಂದು ನನಗೆ ನೆನಪಿಲ್ಲ. ತದನಂತರ ನಮ್ಮ ತಂದೆ ಕಂದಾಯ ದಾಖಲೆಗಳನ್ನು ಅವರ ಹೆಸರಿಗೆ ಬದಲಾವಣೆ ಮಾಡಿಸಿಕೊಂಡಿರುವುದಿಲ್ಲ.

**12)** ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ನಂ.1 ರಿಂದ 3 ರವರ ಪರ ವಕೀಲರು ಕಾಲಾವಕಾಶವನ್ನು ಕೋರಿರುವುದರಿಂದ, ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**